# ಜೈ ಭೀಮ್

■ ಬಿ.ಎಲ್. ವೇಣು

'ಕೂಲಿ ತಗೊಳ್ದೆ ಗುಡಿ ಕಟ್ಟಿದೀವಿ ಗೊತ್ತಾ. ಅಂತಿಂಥ ಗುಡಿ ಅಲ್ಲದು. ಎಕ್ರೆಗಟ್ಲೆ ಜಾಗದಾಗಿರೋ ಭಾರೀ ಗುಡಿ. ನಮ್ಮ ಕೆಳಹಟ್ಟಿಯ ಅರ್ಧದಷ್ಟು ಗುಡಿಯ ಪಾಗಾರವೆ ಅದೆ ಆಳೆತ್ತರದ್ದು. ಅಸಲಿಗೆ ಗುಡೀನೆ ಕಾಣದಷ್ಟು ಕಾಂಪೌಂಡನ್ನು ನಾವೇ ಕಟ್ಟೀವಿ ನಾಂದೆ. ನಿಮ್ಮಗಳ ಕಣ್ಣಿಗೆ ಕಂಡ್ರೂ ಮೈಲಿಗೆಯಾದೀತಂತ್ಲೆ ಪ್ಲಾನ್ ಮಾಡಿಯೇ ಗೌಡ–ಶಾನಭೋಗ ಸೇರಿ ಜೈಲ್‌ಗೋಡೆಯಂತಹ ಕಾಂಪೌಂಡ್ನ ನಿಮ್ಮಿಂದ್ಲೇ ಹಾಕಿಸಿದಾರೆ ಕಣ್ರಲೆ ಕುಂಟ ಕಲ್ಲ' ಎಂದು ನಗ್ತಾ ಅಂದ ನಮ್ಮ ಸಿದ್ದೇಶ.

ನಮ್ಮ ಹಟ್ಟಿನಾಗೆ ಈಗೀಗ ಹುಡ್ರು ಓತ್ತಾವೆ, ಆದರೆ ಸಿದ್ದೇಶನೇ ಮೊದ್ಲು ಕಾಲೇಜ್ 'ಪಾಸ್' ಮಾಡಿ ಸಿಟಿ ಸೇರಿದೋನು. ಮೇಟ್ರಾಗ್ರೀನಿ ಅಂತಿದ್ದೋನು ಯಾವುದೋ ಮಿನಿಟ್ರತಾವ ಪಿಎನ್ನೋ ಗಿಎನ್ನೋ ಆಗವನಂತೆ ಭರ್ಜರಿ ರೊಕ್ಕ ಮಾಡವನಂತೆ. ನಮ್ಮ ಮೊಬ್ಬಳ್ಳಿಗೆ ಬರೋವಾಗ ಅಂವಾ ತನ್ನ ಚೇಲಾಗುಳ್ನ ಕಟ್ಕೊಂಡು ಕಾರ್ನಾಗೆಯಾ ಬರೋದು! ಮೊಬ್ಬಳ್ಳಿ ಗೌಡ, ಶಾನುಭೋಗರಂತಾರೂ ನಮ್ಮ ಕೆಳಹಟ್ಟಿಯವನಾದ ಅವನ್ನ ಶ್ಯಾನೆ ಗೌರವದಿಂದ ಮಾತಾಡಿಸ್ತಾರೆ. ಹಳೆ ಗುಡಿಯು ಹೋದ್ಸಲ ಬಂದ ರಗ್ಗಡ ಮಳೆಗೆ ಬಿದ್ದೋಗದೆ. ಅದನ್ನು ಕಟ್ಟಿಸಬೇಕಂತ ಇಡೀ ಹಳ್ಳಿನೇ ಗೌಡರು ಶಾನುಭೋಗನ ಬೆನ್ನಿಗೆ ಬಿದ್ದು ಸಿಟಿಗೋಗಿ ರಾಜಕಾರಣಿಗಳ ಕಂಡು ಬಂದ್ರೂವೆ ಏನಂತ ಉಪೇಗಾಗಿರಲಿಲ್ಲ. ವರ್ಷಗಟ್ಲೆ ದ್ಯಾವರು, ಅದ್ರಾಗೂ ನರಸಿಮ್ಮ ದ್ಯಾವ್ರು ಪೂಜೆ ಧೂಪ ದೀಪ ಕಾಣದಿದ್ದಾಗ ಹಳ್ಳಿಗೆ ಕೇಡಾಗ್ತದಂತ ಜನಸಾಮಾನ್ಯರಾದಿಯಾಗಿ ಗೌಡ್ರಂಬೋಗೌಡ್ರೂ ಹೆದರ್ಕಂಡಿದ್ದರು.

ಸರ್ಕಾರದ ಮುಜರಾಯಿಗೆ ಸೇರಿದ್ದಾದರೂ ಗುಡಿ ಕಟ್ಟೋ ಬಗ್ಗೆ ಯಾವ ರಾಜಕಾರಣಿಗೂ ಇಂಟರೆಸ್ಟೇ ಇರಲಿಲ್ಲ, ಕಡೆಗೆ ಸಿಟ್ಟಿಗೆದ್ದ ಗೌಡ್ರೂ ಊರ ಸಮಸ್ತರನ್ನು ಪಂಚಾಯಿತಿಗೆ ಕರೆದು ಮೀಟಿಂಗ್ ಮಾಡಿ, ನಾವ್‌ನಾವೇ ಚಂದಾ ಎತ್ತಿ ಗುಡಿನ ಕಟ್ಟಿ ಬಿಡೋಣ ಅಂಬೋ ತೀರ್ಮಾನಕ್ಕೆ ಬಂದರು. ಏನಂದ್ರೂ ನಮ್ಮ ಮೊಬ್ಬಳ್ಳಿ ಜನ ಮಹಾನ್‌ಭಕ್ತರು. ಕೈ ಬಿಚ್ಚಿ ದುಡ್ಡು ಕೊಟ್ಟರು. ಪ್ಯಾಟೆಯಿಂದ ಗುಡಿ ಕಟ್ಟೋರೂ ಬರಬೇಕಿತ್ತು.

'ನೀವೇನ್ ಮಾಡ್ತಿರಲೆ?', ಗೌಡ್ರು ನಮ್ಮಹಟ್ಟಿ ಜನರನ್ನು ಕೊಶ್ಚನ್ ಮಾಡಿದರು.

'ಕೂಲಿ ಮಾಡ್ಕೊಂಡು ತಿಂಬೋರು ನಾವೇನ್ ಕೊಟ್ಟೇವು ಬುದ್ಧಿಯೋರ' ಅಂತ ಮೋರೆ ಇಳಿಸಿದಾಗ ಗೌಡ್ರು ಒಂದು ಮಾತು ಹೇಳಿದ್ರು – 'ನೀವು ಮನೆಗೊಬ್ಬ ಗಂಡಾಳೋ, ಹೆಣ್ಣಾಳೋ ದಿನಾ ಗುಡಿ ಕಟ್ಟೋಕೆ ಬರ್ರಲೆ. ಕೂಲಿ ತಗೊಳ್ದೆ ಕೆಲಸ ಮಾಡ್ರಿ. ದ್ಯಾವರ ಸೇವಾ ಅಂದ್ಕೊಳ್ಳಿ' ಅಂತ ಆರ್ಡರ್ ಮಾಡಿದರು.

'ನರಸಿಮ್ಮ ದೇವರು ಮಾಮೂಲಿ ದೇವರುಗಳಂಗಲ್ಲ. ಬಲು ಸಿಟ್ಟಿನೋನು, ಸಿಟ್ಟು ಬಂದ್ರೆ ಹೊಟ್ಟೆ ಬಗೆದೋನು' ಅಂತಂದು ಶಾನುಭೋಗ ಅಲಿಯಾನ್ ನರಸಿಮ್ಮದೇವರ ಗುಡಿ ಪೂಜಾರಿ ನಾರಾಣಪ್ಪನೂ ಹೆದರಿಸಿದ. ಇಡೀ ಹಟ್ಟಿನೇ ಹೆದಕ್ಕೊಂಡು ತಲೆ ಆಡಿಸಿ ದಿನಾ ಮನಿಗೊಬ್ಬರಂತೆ ಪುಗಸಟ್ಟೆ ಕೂಲಿಗೆ ಹೋಗುತ್ಲು ಗುಡಿ ಬ್ಯಾಗ ತಲೆ ಎತ್ಕಂತು. ಸಿಟಿ ಕೂಲಿಯೋರಂಗೆ ನಮ್ಮೋರು ಕುಂತು ಕಾಲ ಕಳೀಲಿಲ್ಲ, ನಮ್ಮೂರು, ನಮ್ಮಗುಡಿ, ನಮ್ಮ ದ್ಯಾವ್ರ ಅಂತದಂದು ಶ್ಯಾನೆ ಪಿರೂತಿಯಿಂದ ಬಿಸಿಲು ಮಳೆ ಚಳಿಗಾಳಿ ಅನ್ನದಂಗೆ ವರ್ಷಗಳ್ನ ಲೆಕ್ಕಕ್ಕಿಕದೆ ಹಗಲನ್ನದೆ ರಾತ್ರಿ ಅನ್ನದೆ ಬೆವರು ಬಸಿದು ದುಡಿದೆ.

ಆವಾಗೊಮ್ಮೆ ಸಿಟಿಯಿಂದ ಕಾರ್ನಾಗೆ ಸಿದ್ದೇಶ ಅವನ ಗೆಣಕಾರ್ರ್ ಜೊತೆ ಬಂದಿದ್ದ. ಇದನ್ನೆಲ್ಲಾ ನೋಡಿ ಗೇಲಿನೂ ಮಾಡಿದ್ದ. 'ನಿಮ್ಮ ಮಾರಮ್ಮ ಮಾದೇಶ ಪಾಳು ಗುಡಿನಾಗ ಬಿದ್ದಾವೆ. ಅವಕ್ಕೆ ಎಣ್ಣೆ ಬತ್ತಿ ಕಾಣೆಸ್ರ್‌ಲಾ, ವರುಷಕ್ಕೊಂದು ಜಾತ್ರನಾಗ ಕುರಿಕಡ್ಡು ಕಳ್ಳು ಕುಡ್ದು ಜಾತ್ರೆ ಮಾಡಿದ್ರಾಗ್ಲಿಲ್ಲ, ಅವರ ಗುಡಿ ಅವರು ಕಟ್ಟಂತಾರೆ ಬಿಡ್ರಾಲಾ. ಪುಗಸಟ್ಟೆ ನೀವೇನೇ ಮಾಡಿದ್ರು ಮರ್ವಾದೆ ಸಿಗೋಲ್ಲರಲೆ. ಗುಡಿ ಕೆಲಸ ಮುಗಿದು ಅವರ ಗುಡಿನಾಗೆ ದ್ಯಾವರ್ನ ಕುಂಡ್ರಿಸಿ ದೀಪ ಹಚ್ಚಿದ ಮ್ಯಾಗೆ ನಿಮ್ಮನ್ನ ಒಳಾಕೆ ಬಿಟ್ಟಂತರೇನ್ ಕೇಳ್ರಲೆ ಮೊಬ್ಬನನ್ನ ಮಕ್ಕಳ?' ಅಂದಿದ್ದ ಸಿದ್ದೇಶ.

'ಅವರ ಗುಡಿಯಾಕೆ ನಾವ್ಯಾಕೆ ಹೋಗಾದು? ನಮ್ಗೆ ನಮ್ಮದೇ ದ್ಯಾವ್ರು ಅದಾವಲ್ಲ. ನಾವು ಹೋದ್ರೂ ದೊಡ್ಡಮಂದಿ ನಮ್ಮನ್ನೆಲ್ಲಾರ ಬಿಟ್ಟಂಡಾವಾ?' ಅಂತ ನಮ್ಮ ಹಟ್ಟಿ ಯಜಮಾನ್ ಮುತ್ಯಾ ಎಂಕ್ಟಪ್ಪ ಇಷ್ಟಗಲ್ಲ ಬಾಯಿಬಿಟ್ಟು ಹುಬ್ಬೇರಿಸಿದ್ದ.

'ಮತ್ತೆ ಯಾಕಜ್ಜ ಅವರ ದ್ಯಾವ್ರಿಗೆ ಪುಗ್ಸಟ್ಟೆ ದುಡಿತಿರಾ? ಬಿಟ್ಟಾಕಿ. ನೋಡಜ್ಜಾ, ಅಂಬೇಡ್ಕರ್ ಏನು ಹೇಳವರೆ? ಎಲ್ಲರೂ ಸಮಾನರು ಅಂದವರೆ. ಓದ್ರಿ ಅಂತಂದು ನಮ್ಮ ಹೈಕಳಿಗೆ ಮೀಸಲಾತಿ ಕೊಟ್ಟವರೆ. ಎಲ್ಲಿ ಹೆಚ್ಚು ಶಾಲೆಗಳ ಗಂಟೆಗಳು ಕೇಳತಾವೋ

